# ನೆನಪಿನ ಶಾಲೆಗೆ ಪ್ರಯೋಗ ಕೃಷ್ಣ



■ ವಿಶಾಖ ಎನ್.

'ಗೂಢಾಚಾರಿ 116' ಎಂಬೊಂದು ಶೀರ್ಷಿಕೆ ಇಟ್ಟು, ಜೇಮ್ಸ್ ಬಾಂಡ್ ಶೈಲಿಯ ಚಿತ್ರಕಥೆಯನ್ನು ಎಂ. ಮಲ್ಲಿಕಾರ್ಜುನ ರಾವ್ ಎಂಬ ನಿರ್ದೇಶಕರು ಬರೆದಿಟ್ಟರು. ಅದು 1967. ತೆಲುಗಿನಲ್ಲಿ ಪೌರಾಣಿಕ ಸಿನಿಮಾಗಳದ್ದೇ ಕಾಲ. ಜೇಮ್ಸ್ ಬಾಂಡ್ ಸಿನಿಮಾ ಮಾಡಿ, ಹೊಗೆ ಹಾಕಿಸಿಕೊಂಡರೆ ಏನು ಗತಿ ಎಂದು ಕೈಯಾಡಿಸುವವರೇ ಹೆಚ್ಚಾಗಿ ಇದ್ದ ಸಂದರ್ಭ. ನಟ ಕೃಷ್ಣ ಆ ಸಿನಿಮಾದ ನಾಯಕನಾಗಲು ಒಪ್ಪಿದರು. ಇಡೀ ಚಿತ್ರೋದ್ಯಮ ಓಂಥರಾ ವಾರೆಗಣ್ಣಿನಿಂದಲೇ ಆ ಪ್ರಯೋಗವನ್ನು ನೋಡಿತ್ತು. ಮಲ್ಲಿಕಾರ್ಜುನ ರಾವ್ ಅವರಿಗೆ ಮಾತ್ರ ತಮ್ಮ ಮೇಲೆ ಅತೀವ ಆತ್ಮವಿಶ್ವಾಸವಿತ್ತು. ಸಿನಿಮಾ ತೆರೆಕಂಡಿದ್ದೇ ಜನರಿಂದ ಅಭೂತಪೂರ್ವ ಪ್ರತಿಕ್ರಿಯೆ. ಆ ವರ್ಷ ಅದರಷ್ಟು ಹಣವನ್ನು ಬೇರೆ ಯಾವ ಸಿನಿಮಾ ಕೂಡ ಬಾಚಿರಲಿಲ್ಲ. ಮೊನ್ನೆ ಮೊನ್ನೆ 79ನೇ ವಯಸ್ಸಿನಲ್ಲಿ ಅಗಲಿದ ನಟ ಕೃಷ್ಣ ಇದ್ದಿದ್ದೇ ಹಾಗೆ. ಚಿತ್ರಕಥಾ ಪ್ರಯೋಗವಿರಲಿ, ತಂತ್ರಜ್ಞಾನದ ಅಳವಡಿಕೆ ಇರಲಿ ಅವರು ಚಕ್ಕನೆ ಮುಂದಡಿ ಇಡುತ್ತಿದ್ದರು. ಮುಖದ ಗೆರೆ ಕೊಂಕಿಸದೆ, ಲಾಲಿತ್ಯವಿಲ್ಲದೆ ಡ್ರಿಲ್‌ನಂತೆ ನರ್ತಿಸುತ್ತಲೇ, ಮಾತಿನ ಓಘವನ್ನೇ ನೆಚ್ಚಿಕೊಂಡಂತೆ ಅಭಿನಯಿಸುವವರ ಸಾಲಿಗೆ ಅವರು ಸೇರಿದ್ದರು. ಇವೆಲ್ಲ ಊನಗಳಿದ್ದೂ 'ಸೂಪರ್ ಸ್ಟಾರ್' ಆದದ್ದು ಪ್ರಯೋಗಶೀಲತೆಯಿಂದ ಹಾಗೂ ಶಿಸ್ತಿನಿಂದ.

'ಗೂಢಾಚಾರಿ 116' ಅವರ ಮೂರನೇ ಸಿನಿಮಾ ಆಗಿತ್ತಷ್ಟೆ. ಅದಕ್ಕೂ ಎರಡು ವರ್ಷ ಮೊದಲು ಅದುರ್ತಿ ಸುಬ್ಬರಾವ್ ನಿರ್ದೇಶನದ 'ತೇನೆ ಮನಸುಲು' ಎನ್ನುವ ಪ್ರೇಮಕಥೆಯ ಸಿನಿಮಾದಲ್ಲಿ ಅವರು ಮೊದಲಿಗೆ ನಾಯಕನಟ ಆದದ್ದು. ಕೆಲವೇ ವರ್ಷಗಳ ಹಿಂದೆ 'ಕುಲಗೋತ್ರಾಲು', 'ಪರಮ ಪ್ರತಿಷ್ಠಾ' ಚಲನಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡಿದ್ದರು.

1967ರಲ್ಲಿ ಗೂಢಚಾರಿ ಯಶಸ್ವಿಯಾದದ್ದಷ್ಟೇ ಅಲ್ಲ, 'ಸಾಕ್ಷಿ' ಎಂಬ ಅವರೇ ಅಭಿನಯಿಸಿದ್ದ ಮತ್ತೊಂದು ಸಿನಿಮಾ ನೋಡಿ ತಾಷ್ಕೆಂಟ್ ಚಿತ್ರೋತ್ಸವದಲ್ಲಿ ಅನೇಕರು ಚಪ್ಪಾಳೆ ಹೊಡೆದಿದ್ದರು.

ಕೃಷ್ಣ ಏಕಕಾಲದಲ್ಲಿ ಹತ್ತು ಸಿನಿಮಾಗಳಿಗೆ ಸಹಿ ಹಾಕಿರುವುದಿದೆ. ಮೂರು ಶಿಫ್ಟ್‌ಗಳಲ್ಲಿ ಶೂಟಿಂಗ್. 1970ರಲ್ಲಿ ಅವರ 16, 1972ರಲ್ಲಿ 18 ಚಲನಚಿತ್ರಗಳು ತೆರೆಕಂಡಿದ್ದವು. ಕನ್ನಡದಲ್ಲಿ ಶಂಕರ್‌ನಾಗ್ ಹಾಗೂ ವಿಷ್ಣುವರ್ಧನ್ ಫಾರ್ಮ್‌ನಲ್ಲಿ ಇದ್ದಾಗ ವರ್ಷಕ್ಕೆ ಅವರ ಏಳೆಂಟು ಸಿನಿಮಾಗಳು ತೆರೆಕಂಡದ್ದನ್ನು ಕೇಳಿಯೇ ಬೆರಗುಗೊಳ್ಳುವವರಿಗೆ ಇದು ಪರಮ ಸೋಜಿಗವೇ ಹೌದು.

'777', 'ಏಜೆಂಟ್ ಗೋಪಿ' – ಕೃಷ್ಣ ಅವರ ನಟನೆಯ ಮತ್ತೆರಡು ಬಾಂಡ್ ಚಿತ್ರಗಳು. ಆಗ ಅವರಿಗೆ 'ದಿ ಆಂಧ್ರ ಜೇಮ್ಸ್ ಬಾಂಡ್' ಎಂಬ ಗುಣವಿಶೇಷಣವನ್ನು ಅಭಿಮಾನಿಗಳು ಕೊಟ್ಟಿದ್ದರು.

ಅವರು 'ಪದ್ಮಾಲಯ ಸ್ಟುಡಿಯೋಸ್' ನಿರ್ಮಾಣ ಸಂಸ್ಥೆ ಸ್ಥಾಪಿಸಿದರು. 1984ರಲ್ಲಿ ಅವರು ನಿರ್ಮಿಸಿದ 'ಸಿಂಹಾಸನಂ' ಭಾರಿ ಯಶಸ್ವಿಯಾಯಿತು. ಅದನ್ನು 'ಸಿಂಘಾಸನಂ' ಎಂಬ ಹೆಸರಿನಲ್ಲಿ ಹಿಂದಿಯಲ್ಲೂ ರೀಮೇಕ್ ಮಾಡಿದರು. ಅಲ್ಲಿ ಜಿತೇಂದ್ರ ನಾಯಕ. ಅದೂ ದುಡ್ಡು ಬಾಚಿಕೊಟ್ಟಿತು. 'ಮುಗ್ಗುರು ಕೊಡಕುಲು', 'ಕೊಡುಕು ದಿಡ್ಡಿನ ಕಾಪುರಂ', 'ಅಣ್ಣ ತಮ್ಮಂ', 'ಬಾಲಚಂದ್ರುಡು' ಇವೆಲ್ಲವೂ ಅವರ ನಿರ್ಮಾಣ ಸಂಸ್ಥೆಯ ಕೊಡುಗೆ ಸಾರಿಹೇಳುವ ಚಲನಚಿತ್ರಗಳು.

ತಂತ್ರಜ್ಞಾನದ ಬಗೆಗೆ ಅವರಿಗೆ ಅತೀವ ಆಸಕ್ತಿ ಇತ್ತು. 'ಅಲ್ಲುರಿ ಸೀತಾರಾಮ ರಾಜು' ಅವರ ಅಭಿನಯದ ಹಿಟ್ ಸಿನಿಮಾ. ಅದು ತೆಲುಗಿನ ಮೊದಲ ಸಿನಿಮಾಸ್ಕೋಪ್ ಚಿತ್ರವೂ ಹೌದು. 'ಸಿಂಹಾಸನಂ' 70 ಎಂಎಂನಲ್ಲಿ ಚಿತ್ರೀಕರಿಸಿದ ಮೊದಲ ತೆಲುಗು ಸಿನಿಮಾ. ಅವರ 200ನೇ ಚಲನಚಿತ್ರ 'ಈನಾಡು' ತೆಲುಗಿನ ಮೊದಲ ಈಸ್ಟ್‌ಮನ್ ಕಲರ್ ಪ್ರಾಡಕ್ಟು. 1995ರಲ್ಲಿ 'ವೀರ ಲೇವರ' ಸಿನಿಮಾದಲ್ಲಿ ಅವರು ಡಿಟಿಎಸ್ ತಂತ್ರಜ್ಞಾನವನ್ನು ಮೊದಲು ಅಳವಡಿಸಿದರು.

ವಯಸ್ಸಾದಂತೆ ಅವರು ಪೋಷಕ ಪಾತ್ರಗಳಿಗೂ ಬಣ್ಣ ಹಚ್ಚಿದ್ದರು. 'ಬಲಾದೂರ್', 'ಕಾಂತಸ್ವಾಮಿ', 'ವಂಶಿ', 'ರಾಜಕುಮಾರುಡು' – ಇವೆಲ್ಲವೂ ಅವರ ಪೋಷಕ ಪಾತ್ರಗಳಿರುವ ಸಿನಿಮಾಗಳು.

ಅದುರ್ತಿ ಸುಬ್ಬರಾವ್, ಮಧುಸೂದನ್ ರಾವ್, ಕೆ. ವಿಶ್ವನಾಥ್, ಬಾಪು, ದಾಸರಿ ನಾರಾಯಣ ರಾವ್, ಕೆ. ರಾಘವೇಂದ್ರ ರಾವ್ ಇಂತಹ ಘಟಾನುಘಟಿ ನಿರ್ದೇಶಕರ ಸಿನಿಮಾಗಳಿಂದ ಕೃಷ್ಣ ಸೂಪರ್‌ಸ್ಟಾರ್ ಆದದ್ದು. ಅವರು ತಮ್ಮ ತಾರಾಪತ್ನಿ ಹಾಗೂ ನಿರ್ದೇಶಕಿ ವಿಜಯ ನಿರ್ಮಲಾ ಅವರೊಟ್ಟಿಗೆ 48 ಸಿನಿಮಾಗಳಲ್ಲಿ ತೆರೆ ಹಂಚಿಕೊಂಡಿದ್ದರು. 2019ರಲ್ಲಿ ನಿರ್ಮಲಾ ತೀರಿಕೊಂಡಿದ್ದರು. ಮೊದಲ ಪತ್ನಿ ಇಂದಿರಾದೇವಿ ಐವರು ಮಕ್ಕಳ ತಾಯಿ. ಅವರಲ್ಲಿ ಮೂರು ಹೆಣ್ಣು, ಎರಡು ಗಂಡು. ಮಗ ರಮೇಶ್ ಬಾಬು ತೀರಿಹೋಗಿದ್ದಾರೆ. ಮಹೇಶ್ ಬಾಬು ಇವತ್ತಿಗೂ ತೆಲುಗಿನ ಸ್ಟಾರ್ ನಟ. ಎಷ್ಟೋ ಹೊಸ ಓದುಗರಿಗೆ ಕೃಷ್ಣ ಅವರನ್ನು ಮಹೇಶ್ ಬಾಬು ತಂದೆ ಎಂದೇ ಮಾಧ್ಯಮಗಳು ಮರುಪರಿಚಯ ಮಾಡಿಕೊಟ್ಟಿವೆ. ಜಯಪ್ರದಾ ಜೊತೆ 47 ಸಿನಿಮಾಗಳಲ್ಲಿ ಕೃಷ್ಣ ಜೋಡಿಯಾದದ್ದು ಇನ್ನೊಂದು ವಿಶೇಷ. ತಂದೆಯಂತೆ ಮಹೇಶ್ ಬಾಬು ಕೂಡ ತಾರಾವರ್ಚಸ್ಸು ಪಡೆದಿದ್ದು, ಅವರ ಚಹರೆಯ ಕನಲದ ಗೆರೆಗಳಲ್ಲೂ ಅಪ್ಪನ ಶಿಸ್ತಿನ ಕನ್ನಡಿ ಇಣುಕುತ್ತದೆ.

1972ರಲ್ಲೇ ಕೃಷ್ಣ ಅಭಿನಯದ 'ಪದಂತಿ ಕಾಪುರಂ' ಸಿನಿಮಾಗೆ ರಾಷ್ಟ್ರಪ್ರಶಸ್ತಿ ಒಲಿದಿತ್ತು. 2009ರಲ್ಲಿ ಚಿತ್ರರಂಗಕ್ಕೆ ಕೃಷ್ಣ ಅವರ ಕೊಡುಗೆಗೆ ಪದ್ಮಭೂಷಣ ಪ್ರಶಸ್ತಿ ಪುರಸ್ಕಾರ ಸಂದಿತು.

1989ರಲ್ಲಿ ಕಾಂಗ್ರೆಸ್‌ನ ಸಂಸದರಾಗಿದ್ದ ಕೃಷ್ಣ, ವಯಸ್ಸು 70 ಸಮೀಪಿಸುತ್ತಿದ್ದಂತೆ ರಾಜಕೀಯದಿಂದ ನಿವೃತ್ತಿ ಪಡೆದಿದ್ದರು. ಐದು ದಶಕಗಳ ಕಾಲ ಅವರು ತೆಲುಗು ಚಿತ್ರರಂಗದಲ್ಲಿ ಮಾಡಿದ ಪ್ರಯೋಗಗಳು ಮಾತ್ರ ಇಂದಿಗೂ ಗುರುತುಗಳಾಗಿ ಉಳಿದಿವೆ.

ಪ್ರತಿಕ್ರಿಯಿಸಿ: feedback@sudha.co.in